ಅಸಲು ದಾವೆ ಸಂಖ್ಯೆ - 118/2010
ಡಿ.ಡಬ್ಲ್ಯು - 01
ದಿನಾಂಕಃ 31-10-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿಯರ ಪರ ಶ್ರೀ. ಎಮ್ ಎಸ್ ಬಿ ವಕೀಲರಿಂದ**

ಈ ದಾವೆಯಲ್ಲಿ ಮಧ್ಯಂತರ ಅರ್ಜಿ 2 ನ್ನು ವಾದಿಯರು ಹೂಡಿದ್ದರು ಎಂದರೆ ಸರಿ. ಅದರಲ್ಲಿ ಸರ್ಕಾರದವರು ಅಥವಾ ಕೊರ್ಟ ಆಫ್ ವಾರ್ಡ್ಸ್ ರವರು 1 ನೇ ಪ್ರತಿವಾದಿಗೆ ಕಬ್ಜಾ ಕೊಡಬಾರದು ಎಂದು ಪ್ರಾರ್ಥನೆ ಮಾಡಿದ್ದರು ಎಂದರೆ ಸಾಕ್ಷಿ ದಾಖಲೆಯನ್ನು ಪರಿಶೀಲಿಸಿ ಸರಿ ಎಂದು ನುಡಿಯುತ್ತಾರೆ. ಅದರಲ್ಲಿ ಚರಾಸ್ತಿಗಳ ಕಬ್ಜೆಯನ್ನು ಕೊಟ್ಟಿದ್ದೇವೆ, ಸ್ಥಿರಾಸ್ಥಿಗಳ ಕಬ್ಜೆಯನ್ನು ಕೊಟ್ಟಿಲ್ಲ ಎಂದು ಸರ್ಕಾರದವರು ಪ್ರತಿವಾದಿ ಪತ್ರ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ಸರ್ಕಾರದವರು ಸಲ್ಲಿಸಿದ ಪ್ರತಿವಾದ ಪತ್ರವನ್ನು ತೋರಿಸಿದ್ದು ಅದರಲ್ಲಿ ಸಾಕ್ಷಿಯು ಖಂಡಿಕೆ ನಂ. 7 ನ್ನು ಓದಿದ್ದು ಆ ರೀತಿ ಎಲ್ಲಿಯೂ ಬರೆದಿಲ್ಲ ಎಂದು ನುಡಿಯುತ್ತಾರೆ. ಸದರಿ ಮಧ್ಯಂತರ ಅರ್ಜಿ 2 ನೇ ದಕ್ಕೆ ಸರ್ಕಾರದವರು ಸಲ್ಲಿಸಿದ ತಕಾರಾರು/ ಪ್ರತಿವಾದ ಪತ್ರವನ್ನು ನಿಮ್ಮ ತಕರಾರು ಎಂದು ಅಳವಡಿಸಿಕೊಂಡಿರುತ್ತೀರಿ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮಧ್ಯಂತರ ಅರ್ಜಿ 2 ರಮೇಲೆ ಮಾನ್ಯ ನ್ಯಾಯಾಲಯದವರು ಆದೇಶ ಹೊರಡಿಸಿದ್ದರು ಎಂದರೆ ಸರಿ. ಸದರಿ ಮಧ್ಯಂತರ ಅರ್ಜಿ 2 ಕ್ಕೆ ನಿವೇನಾದರೂ ತಕರಾರನ್ನು ಹಾಕಿದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮಧ್ಯಂತರ ಅರ್ಜಿ ನಂ.2 ಯನ್ನು ಮಾನ್ಯ ನ್ಯಾಯಾಲಯವು ಪುರಸ್ಕರಿಸಿ ದಾವಾ ಆಸ್ತಿಗಳ ಕಬ್ಜಾವನ್ನು ಪ್ರತಿವಾದಿ 1 ನೇದ್ದರಿವರಿಗೆ ಕೊಡಬಾರದು ಎಂದು ಆದೇಶ ಆಗಿರುತ್ತದೆ ಎಂದರೆ ಸರಿ. ಸದರಿ ಆ ದೇಶವನ್ನು ಪ್ರಶ್ನಿಸಿ ಹಾವೇರಿ ನ್ಯಾಯಾಲಯದಲ್ಲಿ ಮೇಲ್ಮಮನವಿ ಸಲ್ಲಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸರ್ಕಾರದವರು ಮೇಲ್ಮಮನವಿ ಸಲ್ಲಿಸಿದ್ದರು ಎಂದರೆ ಸರಿ. ಅದು ವಜಾ ಆಗಿರುತ್ತದೆ ಎಂದರೆ ನನಗೆ ನೆನೆಪಿಲ್ಲ ಎಂದು ನುಡಿಯುತ್ತಾರೆ. ಸದರಿ ಮೇಲ್ಮಮನವಿ ಯಲ್ಲಿ ನೀವು ಸಹ ಪಕ್ಷಗಾರರು ಆಗಿದ್ದರಿ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಆದ ಅದೇಶವನ್ನು ಪ್ರಶ್ನಿಸಿ ಯಾವುದೇ ನ್ಯಾಯಾಲಯದಲ್ಲಿ ನೀವು ಮೇಲ್ಮಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಮಧ್ಯಂತರ ಅರ್ಜಿ 2 ನೇದ್ದರಲ್ಲಿ ಆದ ಆದೇಶಹಿ ಇಂದಿಗೂ ಸಹ ಚಾಲ್ತಿಯಲ್ಲಿ ಇರುತ್ತದೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ.

ಸ್ಥಿರಾಸ್ತಿಗಳ ಆಸ್ತಿಯ ಮಾಲ್ಕಿಯು ಕಬ್ಜಾ ವಹಿವಾಟನ್ನು ಒಳಗೊಂಡಿರುತ್ತದೆ ಎಂದರೆ ಸರಿ. ಮಧ್ಯಂತರ ಅರ್ಜಿ 2 ನೇದ್ದರ ಆದೇಶದ ನಂತರ ಸ್ಧಿರಾಸ್ತಿಗಳ ಕಬ್ಜಾವನ್ನು ಪಡೆದಿದ್ದೇನೆ

ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನೀವು ಹಾಜರುಪಡಿಸಿಲ್ಲಾ ಎಂದರೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ದಿಃ 28-01-2011 ರಂದು ಮಧ್ಯಂತರ ಅರ್ಜಿ 2 ನೇ ಮೇಲೆ ಆದೇಶ ಆಗಿರುತ್ತದೆ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ಹೌದು ಎಂದು ನುಡಿಯುತ್ತಾರೆ. ಸದರಿ ಆದೇಶದಲ್ಲಿ ಪ್ರತಿವಾದಿ 3 ಮತ್ತು 4 ರವರು ದಾವಾ ಆಸ್ತಿಗಳ ಕಬ್ಜಾವನ್ನು ನಿಮಗೆ ನೀಡಬಾರದು ಎಂದು ಪ್ರತಿಬಂಧಕಾಜ್ಞೆ ಆದೇಶ ಆಗಿರುತ್ತದೆ ಎಂದರೆ ಸರಿ. ಈ ದಾವೆಯಲ್ಲಿ ಪ್ರತಿವಾದಿ 3 ರಾಜ್ಯ ಸರ್ಕಾರ ಡಿ ಸಿ ಹಾವೇರಿ, ಪ್ರತಿವಾದಿ ಸಂಖ್ಯೆಃ 4 ಉಪ ವಿಭಾಗಾಧಿಕಾರಿಗಳು ಸವಣೂರ ಇರುತ್ತಾರೆ ಎಂದರೆ ಸರಿ. ಕೋರ್ಟ ಆಫ್ ವಾರ್ಡ್ಸ ನವರು ಪ್ರತಿವಾದಿ 3 ಮತ್ತು 4 ನೇದ್ದವರಿಗೆ ದಾವಾ ಆಸ್ತಿಗಳ ಕಬ್ಜೆ ಕೊಡುವ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲುಆದೇಶ ಮಾಡಿದ್ದರು ಎಂದರೆ ಸರಿ. ಮಧ್ಯಂತರ ಅರ್ಜಿ ನಂ. 2 ರ ಆದೇಶದ ನಂತರ ಕೋರ್ಟ ಆಫ್ ವಾರ್ಡ್ಸ, ಡಿ ಸಿ ಹಾವೇರಿ, ಎ ಸಿ ಸವಣೂರ ರವರಾಗಲಿ ಕಬ್ಜಾವನ್ನು ನಿಮಗೆ ಕೊಟ್ಟಿದ್ದಾರೆ ಎಂದುತೋರಿಸಲು ಯಾವ ದಿನಾಂಕದಂದು ಅವರು ಕಬ್ಜಾ ಪಾವತಿ ನೀಡಿದ್ದಾರೆ ಎಂದು ಹೇಳಲು ಆಗುತ್ತದೆಯಾ ಎಂದರೆ ಯಾವುದು ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

ದಿಃ 08-09-2010 ರಂದು ಪ್ರತಿವಾದಿ ನಂ. 4 ರವರು ತಮ್ಮ ಪ್ರತಿವಾದಿ ಪತ್ರವನ್ನು ಸಲ್ಲಿದ್ದಾರೆ ಎಂದರೆ ಸರಿ. ಸದರಿ ಪ್ರತಿವಾದ ಪತ್ರದಲ್ಲಿನ 3 ನೇ ಪೂಟದ ಖಂಡಿಕೆ 7 ನ್ನು ಸಾಕ್ಷಿಗೆ ಓದಿ ಹೇಳಿದ್ದು ಅವರು ಒಪ್ಪಿರುತ್ತಾರೆ. ಸ್ಥಿರಾಸ್ತಿಗಳನ್ನು 1 ನೇ ಪ್ರತಿವಾದಿ ಕಬ್ಜೆಗೆ ಕೊಟ್ಟಿದ್ದೇವೆ ಎಂದು 4 ನೇ ಪ್ರತಿವಾದಿಯರು ಎಲ್ಲಿಯೂ ಒಪ್ಪಿಕೊಂಡಿಲ್ಲ ಎಂದರೆ ಒಪ್ಪಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮುಂದುವರೆದು 3 ಮತ್ತು 4 ನೇ ಪ್ರತಿವಾದಿಯರು ಕಬ್ಜಾವನ್ನು ಕೊಟ್ಟಿರುತ್ತಾರೆ. ಸದರಿ ಮಧ್ಯಂತರ ಅರ್ಜಿಯ 2 ನೇದ್ದರ ಮೇಲೆ ಆದೇಶದ ಬಗ್ಗೆ ನಿಮಗೆ ಸಂಪೂರ್ಣ ಮಾಹಿತಿ ಇತ್ತು ಎಂದರೆ ಸರಿ. ಕೋರ್ಟ ಆಫ್ ವಾರ್ಡ್ಸ, ಪ್ರತಿವಾದಿ 3 ಮತ್ತು 4 ನೇದ್ದವರು ನಿಮಗೆ ಕಬ್ಜಾ ಕೊಟ್ಟಿದ್ದಾರೆ ಎಂದು ಅವರನ್ನು ಸಾಕ್ಷಿಧಾರರನ್ನಾಗಿ ಮಾಡಿಸುತ್ತೀರಾ ಎಂದರೆ ಅವರುಗಳು ದಾಖಲೆಗಳನ್ನು ನೀಡಿದ್ದಾರೆ ಎಂದು ನುಡಿಯುತ್ತಾರೆ. ಸರ್ಕಾರದವರು ಏನಾದರೂ ಸಾಕ್ಷಿಧಾರರಾಗಿ ಬಂದು ಸದರಿ ದಾಖಲೆಗಳನ್ನು ಸಲ್ಲಿಸೀದ್ದಾರಾ ಎಂದರೆ ಇಲ್ಲ ಎಂದು ನುಡಿಯತ್ತಾರೆ.

ಈ ದಾವೆ ಚಾಲ್ತಿಯಲ್ಲಿ ಇರುವಾಗ ಒಂದು ದಾವಾ ಆಸ್ತಿಯನ್ನು ಇಸ್ಮಾಯಿಲ್ ಬ್ಯಾಹಟ್ಟಿ ರವರಿಗೆ ಮಾರಾಟ ಮಾಡಿದ್ದೀರಿ ಎಂದರೆ ಸರಿ. ಸದರಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ನ್ಯಾಯಾಲಯದಿಂದ ಅನುಮತಿ ಪಡೆದಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ನ್ಯಾಯಾಲಯಕ್ಕೆ ಮತ್ತು ಬೇರೆ ಬೇರೆ

ಇಲಾಖೆಗಳಿಗೆ ತಪ್ಪು ಮಾಹಿತಿ ನೀಡಿ ದಾಖಲೆಗಳನ್ನು ಸೃಷ್ಠಿಸಿಕೊಂಡು ಕೆಲವು ದಾವಾ ಆಸ್ತಿಗಳನ್ನು ಇತರರಿಗೆ ಮಾರಾಟ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಮಧ್ಯಂತರ ಅರ್ಜಿ ನಂ 2 ನೇದ್ದರ ಮೇಲೆ ಆದ ಆದೇಶದ ಮೇರೆಗೆ ದಾವಾ ಆಸ್ತಿಗಳ ಉತಾರಗಳಲ್ಲಿ ಇತರೇ ಕಾಲಂಗಳಲ್ಲಿ ಆದೇಶ ಕುರಿತು ವಾದಿಯರು ನಮೂದು ಮಾಡಿಸಿದ್ದರು ಎಂದರೆ ಸರಿಯಲ್ಲ. ವಾದಿಯರಿಗೆ ಮೋಸ ಮಾಡಿ ಸದರಿ ಆದೇಶದ ಕುರಿತು ದಾವಾ ಆಸ್ತಿಗಳ ಉತಾರಗಳಲ್ಲಿ ಅದನ್ನು ತೆಗೆಸಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಉತಾರದ ಇತರೇ ಕಾಲಂಗಳಲ್ಲಿ ಈ ರೀತಿ ನಮೂದು ಆದರೆ ದಾವಾ ಆಸ್ತಿಗಳನ್ನು ಮಾರಾಟ ಮಾಡಲು ತೊಂದರೆ ಆಗುತ್ತದೆ ಎಂಬ ಕಾರಣದಿಂದ ಅವುಗಳನ್ನು ತೆಗೆಯಿಸಿರುತ್ತೀರಿ ಎಂದರೆ ಸರಿಯಲ್ಲ. ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಿಲಾಪೆಯಾಗಿ ವಾದಿಯರಿಗೆ ಯಾವುದೇ ನೋಟಿಸ ನೀಡದೆ ಸದರಿ ಆದೇಶವನ್ನು ತೆಗೆಯಿಸಿರುತ್ತೀರಿ ಎಂದರೆ ಸರಿಯಲ್ಲ.

ನಿಮಗೆ ವಾರಸಾದಾರರು ಮತ್ತು ಹತ್ತಿರ ಸಂಬಂಧಿಕರ ಮಧ್ಯ ಇರುವ ವ್ಯತ್ಯಾಸ ಗೊತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾರಸಾದಾರರು ಎಂದರೆ ಮೃತನ ಮರಣದ ನಂತರ ಅವನ ಹಕ್ಕನ್ನು ತೆಗೆದುಕೊಳ್ಳುವವರು ವಾರಸಾದರರು, ಸದರಿ ವಾರಸಾದರರು ಇಲ್ಲದೇ ಇದ್ದರೆ ನಂತರ ಹತ್ತಿರದ ಸಂಬಂಧಿಕರು ಬರುತ್ತಾರೆ ಎಂದರೆ ವಾರಸಾದರರ ಹೇಳಿಕೆ ಸರಿ ಇದೆ ಹತ್ತಿರದ ಸಂಬಂಧಿಕರು ನನಗೆ ಗೊತ್ತಿಲ್ಲ.

ಅಸಲು ದಾವಾ ಸಂಖ್ಯೆಃ 171/1984 ನ್ನು ಪ್ರಶ್ನಿಸಿ ಯಾರು ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಡಿ ಸಿ ಧಾರವಾಡ ಮತ್ತು ಕೊರ್ಟ ಆಫ್ ವಾರ್ಡ್ಸ ರವರು ಸಲ್ಲಿಸಿದ್ದರು. ಸದರಿ ಮೇಲ್ಮನವಿಯಲ್ಲಿ 1 ನೇ ಪ್ರತಿವಾದಿ ಸರಳ ಸಮೀಪದ ವಾರಸುದಾರರು ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ಮುಂದುವರೆದು ಏಕೈಕ ವಾರಸುದಾರರು ಎಂದು ಬರೆದಿದ್ದಾರೆ. ಏಕೈಕ ವಾರಸುದಾರರು ಎಂದು ಬರೆದಿದ್ದಾರೆ ಎಂದು ಸೃಷ್ಠಿ ಮಾಡಿಕೊಂಡು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಆಸ್ತಿ ಸಂಖ್ಯೆಃ 2037/ಬಿ 1 ಮತ್ತು ಬಿ 2 ಸಹ ದಾವಾ ಆಸ್ತಿ ಇರುತ್ತದೆ ಎಂದರೆ ಸರಿ. ಮಧ್ಯಂತರ ಅರ್ಜಿ ನಂ. 2 ನೇದ್ದರ ಮೇಲೆ ಆದೆ ಆದೇಶ ಕುರಿತು ಸದರಿ ಆಸ್ತಿಗಳ 2037/ಬಿ 1 ಮತ್ತು ಬಿ 2 ನೇದ್ದರ ಉತಾರಗಳಲ್ಲಿ ದಾಖಲು ಆಗಿದೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅದು ಜೆರಾಕ್ಸ ಪ್ರತಿಯಾಗಿದ್ದು ಅದನ್ನು ನಿಪಿ-136 ಎಂದು ಗುರುತಿಸಲಾಯಿತು. ಮಧ್ಯಂತರ ಅರ್ಜಿ ನಂ. 2 ನೇದ್ದರ ಮೇಲೆ ಆದ ಆದೇಶ ಕುರಿತು ನಿಪಿ- 136 ರಲ್ಲಿ ಉಲ್ಲೇಖ ಇದೆ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ಇದೆ

ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ: 249/2014 ರಲ್ಲಿ ಆದ ಆದೇಶ ಕುರಿತು ವಾದಿಯರು ದಾವಾ ಆಸ್ತಿಗಳ ಉತಾರದಲ್ಲಿ ನಮೂದು ಮಾಡಿರಸಿರುವುದಿಲ್ಲ ಎಂದರೆ ಮಾಡಿಸಿದ್ದರು ಎಂದು ನುಡಿಯುತ್ತಾರೆ. ಆ ರೀತಿ ಮಾಡಿಸಿದ್ದರು ಎಂದು ತೋರಿಸಲು ನಿವೇನಾದರೂ ದಾಖಲೆಗಳನ್ನು ನೀಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಅಸಲು ದಾವಾ ಸಂಖೆ: 249/2014 ರ ಮೇಲೆ ಆದ ದಿ: 02-07-2022 ರ ಆದೇಶವನ್ನು ತೆಗೆಯಲು ನೀವೆನಾದರೂ ಅರ್ಜಿ ಸಲ್ಲಿಸಿದ್ದರಾ ಎಂದರೆ ಸಲ್ಲಿಸಿದ್ದೇವು ಎಂದು ನುಡಿಯುತ್ತಾರೆ. ಸದರಿ ಅರ್ಜಿಯನ್ನು ಯಾವ ದಿನಾಂಕದಂದು ಸಲ್ಲಿಸಿರುತ್ತೀರಿ ಎಂದರೆ ನನಗೆ 17 ರಂದು ನಮೂದು ಆಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ಈಗಾಗಲೇ ತೋರಿಸಿ ಒಪ್ಪಿಕೊಂಡಿರುವ ನಿಪಿ- 136 ನ್ನು ತೋರಿಸಿದ್ದು ಸದರಿ ದಾಖಲೆಯು ಜೆರಾಕ್ಸ ಪ್ರತಿ ಇರುವುದರಿಂದ ನಾನು ಸದರಿ ದಾಖಲೆಯ ಬಗ್ಗೆ ಯಾವುದೇ ಉತ್ತರವನ್ನು ನೀಡುವುದಿಲ್ಲ ಎಂದು ನುಡಿಯುತ್ತಾರೆ. ನೀವು ಯಾಕೆ ಸಾಕ್ಷಿ ಹೇಳಲು ನಿರಾಕರಿಸುತ್ತಿದ್ದೀರಿ ಎಂದರೆ, ಮದ್ಯಂತರ ಅರ್ಜಿ 2 ನೇದ್ದರ ಮೇಲೆ ಆದ ಆದೇಶ ಕುರಿತು ದಿ: 19-08-2017 ರಂದು ನಮೂದು ಆದ ನಮೂದನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳೊಂದಿಗೆ ಮಿಲಾಪೆಯಾಗಿ ತೆಗೆಯಿಸಿರುತ್ತೀರಿ ಎಂದರೆ ಸುಳ್ಳು ಎಂದು ನುಡಿಯುತ್ತಾರೆ. ಮುಂದುವರೆದು ಸದರಿ ದಾಖಲೆ ಒಪ್ಪುವುದಿಲ್ಲ ಎಂದು ನುಡಿಯುತ್ತಾರೆ.

ದಿ: 11-08-2022 ರ ನಮೂದಿನಲ್ಲಿ ಅಸಲು ದಾವಾ ಸಂಖ್ಯೆ: 249/2014 ರ ಉಲ್ಲೇಖ ಮತ್ತು 19-08-2017 ರಲ್ಲಿ ಅಸಲು ದಾವಾ ಸಂಖ್ಯೆ: 118/2010 ರ ಉಲ್ಲೇಖ ಇದೆ ಎಂದರೆ ಸಾಕ್ಷಿಯು ಉತ್ತರವನ್ನು ಹೇಳಲು ನಿರಾಕರಿಸಿರುತ್ತಾರೆ. ಅಸಲು ದಾವಾ ಸಂಖ್ಯೆ: 118/2010 ರಲ್ಲಿ 28-01-2011 ರಂದು ಆದ ಆದೇಶದ ನಮೂದು ಇದ್ದರೆ ದಾವಾ ಆಸ್ತಿಗಳನ್ನು ಬೇಕಾಯ್ದೆಶೀರವಾಗಿ ಮಾರಾಟ ಮಾಡಲು ಬರುವುದಿಲ್ಲ ಎಂದು ದಾಖಲೆಗಳನ್ನು ಸೃಷ್ಟಿಸಿ ಸದರಿ ನಮೂದನ್ನು ತೆಗೆಯಿಸಿರುತ್ತೀರಿ ಎಂದರೆ ಸುಳ್ಳು ಇರುತ್ತದೆ. ನಿಮ್ಮ ಪ್ರತಿವಾದ ಪತ್ರದಲ್ಲಿ Ascendants and descendants ಎಂದು ನಮೂದು ಮಾಡಿದ್ದು ಈ ವಿಷಯವು ಅಸಲುದಾವಾ ಸಂಖ್ಯೆ171/1984 ರಲ್ಲಿ ಎಲ್ಲಿಯೂ ನಮೂದು ಮಾಡಿಲ್ಲ ಎಂದರೆ ನನಗೆ ನೆನೆಪಿರುವುದಿಲ್ಲ. ಸಾಕ್ಷಿಗೆ ಅಸಲು ದಾವಾ ಸಂಖ್ಯೆ 171/1984 ರ ವಾದ ಪತ್ರ(ನಿಪಿ-94) ತೋರಿಸಿದ್ದು ಅದರಲ್ಲಿ ಎಲ್ಲಿಯೂ ಸಹ Ascendants and descendants ನಮೂದು ಕಾಣಿಸಿಲ್ಲ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ಇಲ್ಲ ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೇ 171/1984 ರಲ್ಲಿ Ascendants

and descendants ಗಳನ್ನು ಕಾಣಿಸಿದ್ದರೆ ನ್ಯಾಯಾಲಯಕ್ಕೆ ನಿಜವಾದ ಸತ್ಯ ತಿಳಿಯುತ್ತಿತ್ತು ಎಂದರೆ ಅದು ನಮ್ಮ ವಕೀಲರಿಗೆ ಗೊತ್ತಿರುತ್ತದೆ. ನಿಮ್ಮ ವಕೀಲರಿಗೆ Ascendants and descendants ರ ಬಗ್ಗೆ ಮಾಹಿತಿ ನೀಡಿದ್ದರಾ ಎಂದರೆ ನೀಡಿದ್ದೇನೆ. ಮರಣ ಹೊಂದಿದ ವ್ಯಕ್ತಿಗೆ Ascendants and descendants ಯಾರು ಯಾರು ಇದ್ದರು ಎಂದು ತೋರಿಸಿರುವುದಿಲ್ಲ ಎಂದರೆ ಸರಿ.

1 ನೇ ಪ್ರತಿವಾದಿಯು ಅಸಲು ದಾವಾ ಸಂಖ್ಯೆಃ 171/1984 ರಲ್ಲಿ Ascendants and descendants ರ ಸಂಪೂರ್ಣ ಮಾಹಿತಿಯನ್ನು ನೀಡಿದರೆ ನ್ಯಾಯಾಲಯದಿಂದ ಆದೇಶ ಪಡೆಯಲು ಆಗುವುದಿಲ್ಲ ಎಂಬ ದುರದ್ದೇಶದಿಂದ ಅವರ ಸಂಪೂರ್ಣ ಮಾಹಿತಿಯನ್ನು ಮರೆಮಾಚಿ ಆದೇಶ ಪಡೆದಿರುತ್ತಾರೆ ಎಂದರೆ ಸುಳ್ಳು ಇರುತ್ತದೆ. ಈ ದಾವೆಯಲ್ಲಿ ಇರುವ ಎಲ್ಲಾ ದಾವಾ ಆಸ್ತಿಗಳನ್ನು ಅಸಲು ದಾವಾ ಸಂಖೆಃ 171/1984 ರಲ್ಲಿ ನಮೂದು ಮಾಡಿದ್ದೀರಾ ಎಂದರೆ ಸರಿ. ಅಸಲು ದಾವಾ ಸಂಖ್ಯೆ 171/1984 ರಲ್ಲಿ ಕೇವಲ ಘೋಷಣಾತ್ಮಕ ದಾವೆ ಮಾಡಿದ್ದೀರಿ ಎಂದರೆ ಸರಿಯಲ್ಲ ಮುಂದುವರೆದು ಘೋಷಣಾತ್ಮಕ ಮತ್ತು ಅರ್ಹತೆ ಮಾಡಿರುತ್ತೇವೆ. ಆ ರೀತಿ ಇಲ್ಲದೆ ಇದ್ದರು ಇದೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 171/1984 ಹೂಡುವ ಮೊದಲೇ ಮೋಸ ಮಾಡುವ ದುರದ್ದೇಶದಿಂದ ಎಲ್ಲಾ ತರಹದ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ವಾದಿಯರು, ಉಳಿದ ಪ್ರತಿವಾದಿಯರು ನವಾಜಖಾತು ರವರಿಗೆ ಹತ್ತಿರ ಸಂಬಂಧಿಕರಿದ್ದು ಅದೇ ರೀತಿ ನಿಮ್ಮ ಹೆಂಡತಿಯು ಸಹ ಹತ್ತಿರದ ಸಂಬಂಧಿಕರಿರುತ್ತಾರೆ ಎಂದರೆ ಸುಳ್ಳು ಇರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದವರು ಆರ್ ಎಸ್ ಎ ನಂ. 130/1999 ರಲ್ಲಿ 1 ನೇ ಪ್ರತಿವಾದಿಯು ಹತ್ತಿರದ ಸಂಬಂಧಿಕರು ಎಂದು ನಮೂದು ಮಾಡಿದ್ದಾರೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 171/1984 ರಲ್ಲಿ 1 ನೇ ಪ್ರತಿವಾದಿಯು ಏಕೈಕ ವಾರಸುದಾರರು ಎಂದು ಆದೇಶ ಮಾಡಿದ್ದು ಮತ್ತು 2 ನೇ ಮೇಲ್ಮನವಿಯಾದ ಆರ್ ಎಸ್ ಎ ನಂ. 130/1999 ರಲ್ಲಿ 1 ನೇ ಪ್ರತಿವಾದಿಯು ಹತ್ತಿದರ ಸಂಬಂಧಿಕರು ಎಂದು ಆದೇಶ ಮಾಡಿದ್ದಾರೆ ಎಂದರೆ ಸರಿ. ಸದರಿ ಮೇಲ್ಮನವಿ ಆದೇಶವನ್ನು ಕುರಿತು ನೀವು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ 1 ನೇ ಪ್ರತಿವಾದಿಯೇ ಏಕೈಕ ವಾರಸುದಾರರು ಇರುವುದರಿಂದ ನಾವು ಮೇಲ್ಮನವಿ ಸಲ್ಲಿಸಿವ ಅವಶ್ಯಕತೆ ಇರುವುದಿಲ್ಲ. ಮೇಲ್ಮನವಿಯಾದ ಆರ್ ಎಸ್ ಎ ನಂ. 130/1999 ರಲ್ಲಿ 1 ನೇ ಪ್ರತಿವಾದಿಯು ಏಕೈಕ ವಾರಸುದಾರರು ಎಂದು ಎಲ್ಲಿಯೂ ಆದೇಶ ಮಾಡಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯು

ಏಕೈಕ ವಾರಸುದಾರರು ಎಂದು ಸುಳ್ಳು ಹೇಳಿ ಸಾಧಿಸುತ್ತೀದ್ದೀರಿ ಎಂದರೆ ಸರಿಯಲ್ಲ. ವಾದಿಯರು ಮತ್ತು ಉಳಿದ ಪ್ರತಿವಾಯರು ನವಾಜಖಾತು ರವರಿಗೆ ಹತ್ತಿರದ ಸಂಬಂಧಿಕರು ಆಗಿದ್ದರು ಸಹ ಅದನ್ನು ಮರೆಮಾಚಿ 1 ನೇ ಪ್ರತಿವಾದಿಯೇ ಏಕೈಕ ವಾರಸುದಾರರು ಎಂದು ಸುಳ್ಳು ಆದೇಶ ಪಡೆದು ಅದನ್ನೇ ಸಾಧಿಸುತ್ತಿದ್ದೀರಿ ಎಂದರೆ ಸುಳ್ಳು ಇರುತ್ತದೆ. ವಾದಿಯರಿಗೆ ಮತ್ತು ಉಳಿದ ಪ್ರತಿವಾದಿಯರಿಗೆ ಆಸ್ತಿ ಹೋಗಬಾರದು ಎಂಬ ಉದ್ದೇಶದಿಂದ ಸುಳ್ಳು ವಿಷಯಗಳನ್ನು ಸೃಷ್ಠಿಸಿಕೊಂಡು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.